ದಿನಾಂಕ 15 9 2006 ರಂದು ಲಿಖಿತ ಆಕ್ಷೇಪಣಾ ಹೇಳಿಕೆಯನ್ನು ನಲ್ಲಿಸಲಾಗಿದೆ ಮತ್ತು ಈ ಬಗ್ಗೆ ಅವಶ್ಯ ತುರ್ತು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಸರ್ಕಾರಿ ವಕೀಲರನ್ನು ಕೋರಲಾಗಿದೆ ಹಾಗೂ ಸದರಿ ಅರ್ಜಿ ಕರ್ನಾಟಕ ನ್ಯಾಯಮಂಡಳಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ

448 (840) **ಶ್ರೀ ಸುನಿತ ವೀರಪ್ಪಗೌಡ ಜೆ (ಬನ್ನೂರು)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಹೊಸ ಕಾಲೇಜು ಹಾಲಿ ಇದ್ದ ಕಾಲೇಜು ಹಾಗೂ ಪ್ರೌಢಶಾಲೆಗಳಿಗೆ ಹೊಸ ಕಟ್ಟಡ ಹಾಗೂ ಹೆಚ್ಚುವರಿ ಕೊರಡಿ ಕಾಮಗಾರಿಗಳೆಷ್ಟು (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು),

ಆ) ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು,

ಇ) ಸದರಿ ಕ್ಷೇತ್ರಗಳಲ್ಲಿ ಮುಂದೆ ಕೈಗೊಳ್ಳಲಾಗುವ ಉದ್ದೇಶಿತ ಹೆಚ್ಚುವರಿ ಕೊರಡಿಗಳ ನಿರ್ಮಾಣದ ಕಾಮಗಾರಿಗಳು ಯಾವುವು?

ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಒಟ್ಟು 15 ಹೊಸ ಕಾಲೇಜು ಕಟ್ಟಡಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ (ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ) ಹಾಲಿ ಇರುವ ಒಟ್ಟು 9 ಕಾಲೇಜುಗಳಿಗೆ ಹೆಚ್ಚುವರಿ ಕೊರಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ

ಬಿ) ಪ್ರೌಢಶಾಲಾ ಕಟ್ಟಡಗಳಿಗೆ ಹೆಚ್ಚುವರಿ ಕೊರಡಿಗಳನ್ನು ನಿರ್ಮಿಸುವುದು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ

ಆ) ಕಾಲೇಜು ಕಟ್ಟಡಗಳಿಗೆ ಸಂಬಂಧಪಟ್ಟ ಕಾಮಗಾರಿಗಳಿಗೆ ವಿವಿಧ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಒಟ್ಟು ರೂ 373 31 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ

ಇ) ಈ ಕ್ಷೇತ್ರಗಳಲ್ಲಿ ಮುಂದೆ ಒಟ್ಟು 9 ಕಾಲೇಜುಗಳಿಗೆ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ (ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ)

ಅನುಬಂಧ–1

ಕ್ರ ಸಂ	ಕಾಮಗಾರಿಯ ಹೆಸರು	ಲೆಕ್ಕಶೀರ್ಷಿಕೆ	2006–07ನೇ ಸಾಲಿನ ಅನುದಾನ (ರೂ ಲಕ್ಷಗಳಲ್ಲಿ)
	ಹೊಸ ಕಾಲೇಜುಗಳು		
	ಕೆ ಆರ್ ನಗರ ವಿಧಾನ ಸಭಾ ಕ್ಷೇತ್ರ		
1	ಕೆ ಆರ್ ನಗರದಲ್ಲಿ ಐಟಿಐ ಕಾಲೇಜು ಕಟ್ಟಡ ನಿರ್ಮಾಣ	4059–ಇತರೆ ಇಲಾಖೆ	15 00
2	ಸಾಲಿಗ್ರಾಮದಲ್ಲಿನ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ	4202 – ಉನ್ನತ ಶಿಕ್ಷಣ	60 00
3	ಕೆ ಆರ್ ನಗರ ತಾ ಬೇರ್ಯದಲ್ಲಿ ಕಿರಿಯ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	15 00
	ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರ		
4	ಮೈಸೂರು ತಾ ಮಂಚೇಗೌಡನಕೊಪ್ಪಲಿನಲ್ಲಿ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	22 50

	ಬನ್ನೂರು ವಿಧಾನಸಭಾ ಕ್ಷೇತ್ರ		
5	ಬನ್ನೂರಿನ ಮಹಿಳೆಯರ ಪದವಿಪೂರ್ವ ಕಾಲೇಜಿಗೆ 4 ಕೊರಡಿಗಳ ನಿರ್ಮಾಣ	4202 ಪ್ರೌಢ ಶಿಕ್ಷಣ	6 00
6	ಬಿ ಸಿ ಹಳ್ಳಿಯಲ್ಲಿ ಪದವಿಪೂರ್ವ ಕಾಲೇಜಿಗೆ 2 ಹೆಚ್ಚುವರಿ ಕೊರಡಿಗಳ ನಿರ್ಮಾಣ	4202–ಪ್ರೌಢ ಶಿಕ್ಷಣ	3 00
	ಟಿ ನರಸೀಪುರ ವಿಧಾನಸಭಾ ಕ್ಷೇತ್ರ		
7	ಟಿ ನರಸೀಪುರ ತಾ ಮೂಗೂರಿನಲ್ಲಿ ಪದವಿ ಪೂರ್ವ ಕಾಲೇಜು ಕಟ್ಟಡಕ್ಕೆ 2 ಹೆಚ್ಚುವರಿ ಕೊರಡಿಗಳ ನಿರ್ಮಾಣ	4204–ಪ್ರೌಢಶಿಕ್ಷಣ	3 00
	ಹುಣಸೂರು ವಿಧಾನ ಸಭಾ ಕ್ಷೇತ್ರ		
8	ಕರಿಮುದ್ದನಹಳ್ಳಿಯಲ್ಲಿ ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	15 00
	ಹೆಚ್ ಡಿ ಕೋಟೆ ವಿಧಾನ ಸಭಾ ಕ್ಷೇತ್ರ		
9	ಅಂತರಸಂತೆಯಲ್ಲಿ ವದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	15 00
10	ಬೀಚನಹಳ್ಳಿಯಲ್ಲಿ ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಡ ಶಿಕ್ಷಣ	15 00

11	ಬಿ ಮರಗೆರೆಯಲ್ಲಿ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	15 00
	ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರ		
12	ಪಿರಿಯಾಪಟ್ಟಣದಲ್ಲಿ ಐಟಿಐ ಕಾಲೇಜು ಕಟ್ಟಡ ನಿರ್ಮಾಣ	4059–ಇತರೆ ಇಲಾಖೆ	15 00
13	ಪಿರಿಯಾಪಟ್ಟಣದಲ್ಲಿ ಮಹಿಳೆಯರ ಸರ್ಕಾರಿ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	15 00
	ನಂಜನಗೂಡು ವಿಧಾನ ಸಭಾ ಕ್ಷೇತ್ರ		
14	ಹುಲ್ಲಹಳ್ಳಿಯಲ್ಲಿ ಕಿರಿಯ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	4 50
15	ಕೌಲಂದೆಯಲ್ಲಿ ಕಿರಿಯ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	4 50
	ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿಗಳು		
1	ಹುಣಸೂರಿನಲ್ಲಿನ ಶ್ರೀ ಡಿ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡಕ್ಕೆ ಮೊದಲನೇ ಮಹಡಿ ನಿರ್ಮಾಣ	4202–ಉನ್ನತ ಶಿಕ್ಷಣ	4 31
2	ಹುಣಸೂರಿನಲ್ಲಿನ ಬಾಲಕಿಯರ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	15 00

3	ಹುಣಸೂರಿನಲ್ಲಿನ ಬಾಲಕರ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ	4202–ಪ್ರೌಢ ಶಿಕ್ಷಣ	15 00
4	ಹನಗೋಡು ಗ್ರಾಮದಲ್ಲಿ ಸರ್ಕಾರಿ ವದವಿ ಪೂರ್ವ ಕಾಲೇಜಿಗೆ ಹೆಚ್ಚುವರಿ ಕೊರಡಿಗಳ ನಿರ್ಮಾಣ	4202–ಪ್ರೌಢ ಶಿಕ್ಷಣ	13 50
	ಕೆ ಆರ್ ನಗರ ವಿಧಾನ ಸಭಾ ಕ್ಷೇತ್ರ		
5	ಕೆ ಆರ್ ನಗರದಲ್ಲಿನ ಪ್ರಥಮ ದರ್ಜೆ ಕಾಲೇಜು ಕಟ್ಟಡಕ್ಕೆ ವಿಜ್ಞಾನ ವಿಭಾಗ ನಿರ್ಮಾಣ	4202–ಉನ್ನತ ಶಿಕ್ಷಣ	21 00
6	ಕೆ ಆರ್ ನಗರದಲ್ಲಿನ ಪ್ರಥಮ ದರ್ಜೆ ಕಾಲೇಜು ಕಟ್ಟಡಕ್ಕೆ ಹೆಚ್ಚುವರಿ ಕೊರಡಿಗಳ ನಿರ್ಮಾಣ	4202–ಉನ್ನತ ಶಿಕ್ಷಣ	30 00
	ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರ		
7	ಪಿರಿಯಾಪಟ್ಟಣದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಹೆಚ್ಚುವರಿ ಕೊರಡಿಗಳ ನಿರ್ಮಾಣ	4202–ಉನ್ನತ ಶಿಕ್ಷಣ	22 50
	ಹೆಚ್ ಡಿ ಕೋಟೆ ವಿಧಾನ ಸಭಾ ಕ್ಷೇತ್ರ		
8	ಹೆಚ್ ಡಿ ಕೋಟೆಯಲ್ಲಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ಉಳಿಕೆ ಕಾಮಗಾರಿ	4202–ಉನ್ನತ ಶಿಕ್ಷಣ	22 50

	ನಂಜನಗೂಡು ವಿಧಾನಸಭಾ ಕ್ಷೇತ್ರ		
9	ನಂಜನಗೂಡಿನಲ್ಲಿ ಕಿರಿಯ ಕಾಲೇಜಿಗೆ 4 ಹೆಚ್ಚುವರಿ ಕೊಠಡಿಗಳ ನಿರ್ಮಾಣ	4202–ಪ್ರೌಢ ಶಿಕ್ಷಣ	6 00
			373 31

449 (848) **ಶ್ರೀ ಸುನಿತ/ ವೀರಪ್ಪಗೌಡ ಜೆ (ಬನ್ನೂರು)** ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನೂರು ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರದಿಂದ ಯಾವಾಗ ಅನುಮೋದನೆ ನೀಡಲಾಯಿತು,

ಆ) ಈ ಕಾಮಗಾರಿಗೆ ನಿಗಧಿಯಾದ ಹಾಗೂ ಬಿಡುಗಡೆ ಯಾವ ಅನುದಾನವೆಷ್ಟು,

ಇ) ಟೆಂಡರ್ ಕರೆದಾಗ ಈ ಕಾಮಗಾರಿ ಪೂರ್ಣಗೊಳಿಸಲು ನಿಗಧಿಗೊಳಿಸಲಾದ ಅವಧಿ ಎಷ್ಟು,

ಈ) ಈ ಕಾಮಗಾರಿಯು ಅರ್ಧಕ್ಕೆ ನಿಂತಿರುವುದನ್ನು ಪೂರ್ಣಗೊಳಿಸದೆ ಇರುವುದಕ್ಕೆ ಕಾರಣವೇನು? ಯಾವಾಗ ಪೂರ್ಣಗೊಳಿಸಲಾಗುವುದು,

ಉ) ಈ ಕಾಮಗಾರಿಯು ನಿಂತಿರುವುದರಿಂದ ಚರಂಡಿ ನೀರು ಮೈಸೂರು–ಮಳವಳ್ಳಿ ಮುಖ್ಯ ರಸೆಯ ಪಕ್ಕದಲ್ಲಿ ನಿಂತು ರಸ್ತೆಯಲ್ಲಿ ಪ್ರಯಾಣಿಸುವ ಸಾರ್ವಜನಿಕರಿಗೆ ಅತ್ಯಂತ ಕೆಟ್ಟ ದುರ್ವಾಸನೆ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಊ) ಈ ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ದಿನಾಂಕ 1 12 2000 ರಂದು ಆಡಳಿತಾತ್ಮಕ ಅನುಮೋದನೆ ನೀಡಿದೆ

ಆ) ಸದರಿ ಯೋಜನೆಗೆ ನಿಗಧಿಯಾದ ಸಾಲ ಮತ್ತು ಸ್ಥಳೀಯ ಸಂಸ್ಥೆಯ ವಂತಿಕೆ ಕೆಳಕಂಡಂತಿದೆ, ಸರ್ಕಾರದ ಸಾಲ– ರೂ 156 98ಲಕ್ಷಗಳು